ಎಲ್ಲೋಗಿರಬಹುದು?' ಎಂದು ಪೇಚಾಡಿದಳು.

ಕುಮಾರನಿಗೆ ತಕ್ಷಣ ಏನೋ ಹೊಳೆದಂತಾಗಿ 'ಅಯ್ಯೊಯ್ಯೋ' ಎಂದು ಉದ್ಗರಿಸಿದ. ನಿನ್ನೆ ರಾತ್ರಿ ಕಸವನ್ನು ಅಡುಗೆ ಮನೆಯಿಂದ ತೆಗೆದುಕೊಳ್ಳುವಾಗ ಅದರ ಪಕ್ಕದಲ್ಲಿಯೇ ಇದ್ದ ಮತ್ತೊಂದು ಹಳೆಯ ಕವರನ್ನು ಕೂಡ ಕಸವೆಂದು ತಿಳಿದು, ಅದನ್ನೂ ತೆಗೆದುಕೊಂಡು ಹೋಗಿ ಕಸದ ತೊಟ್ಟಿಯಲ್ಲಿ ತಾನೇ ಎಸೆದುಬಂದಿದ್ದ. ಸ್ಟ್ಯಾಂಡಿನ ಮೇಲೆ ಇಟ್ಟಿದ್ದ ಆ ಸರ್ಟಿಫಿಕೇಟುಗಳು ಇದ್ದ ಕವರ್ ಹೇಗೋ ಕೆಳಗೆ ಕಸದ ಕವರ್ ಹತ್ತಿರ ಬಿದ್ದಿರಬೇಕು ತನಗೆ ಗೊತ್ತಾಗದೆ ಕಸವೆಂದು ತಿಳಿದು ಎಸೆದು ಬಂದಿದ್ದೇನೆ ಎಂದುಕೊಂಡ. ತನ್ನದೇ ತಪ್ಪು, ಆ ಕವರಿನಲ್ಲಿ ಏನಿದೆ ಎಂದು ಒಮ್ಮೆ ನೋಡಬೇಕಿತ್ತು ಎಂದುಕೊಂಡ. ನಡೆದ ವಿಷಯವನ್ನೆಲ್ಲಾ ಹೆಂಡತಿಗೂ ಹೇಳಿದ. 'ಒಟ್ಟಿನಲ್ಲಿ ತಪ್ಪು ಯಾರದಾದರೂ ಆಗಿರಲಿ, ಸರ್ಟಿಫಿಕೇಟುಗಳಂತೂ ಹೋದವಲ್ಲ' ಎಂದಳು.

'ತಡೀ ಒಮ್ಮೆ ಆ ಕಸದ ತೊಟ್ಟಿಯಲ್ಲಿ ಹುಡುಕಿ ಬರುತ್ತೇನೆ' ಎಂದು ಕುಮಾರ ಚಪ್ಪಲಿ ಹಾಕಿಕೊಂಡು ಹೊರಟ. ಕಸದ ತೊಟ್ಟಿಯ ಹತ್ತಿರ ಬರುತ್ತಿದ್ದ ಗಬ್ಬುನಾತವನ್ನು ತಡೆಯಲು ಮೂಗನ್ನು ಮುಚ್ಚಿಕೊಂಡು ಟಾರ್ಚ್ ಬೆಳಕನ್ನು ಕಸದ ತೊಟ್ಟಿಯೊಳಗೆ ಬೀರಿದ. ಕಸದ ತೊಟ್ಟಿ ಖಾಲಿಯಿತ್ತು. ನಿನ್ನೆಯ ಕಸವನ್ನೆಲ್ಲಾ ಎತ್ತಿಕೊಂಡು ಹೋಗಿದ್ದರು. ಏನು ಮಾಡುವುದು ಎಂದು ಯೋಚಿಸುತ್ತಿರಬೇಕಾದರೆ ತಕ್ಷಣ ನಿನ್ನೆಯ ದಿನ ಕಸದ ತೊಟ್ಟಿಯಿಂದ ಎದ್ದು ತನ್ನನ್ನು ಮಾತನಾಡಿಸಿದ್ದ ಚಿಂದಿ ಆಯುವ ನಾರಾಯಣನನ್ನು ಕೇಳಿದರೆ ಏನಾದರೂ ಕ್ಲೂ ಸಿಗಬಹುದು ಎಂದುಕೊಂಡ. ಆದರೆ ಅವನನ್ನು ಎಲ್ಲಿ ಹುಡುಕುವುದು? ಅವನ ಮನೆ ಎಲ್ಲಿದೆ? ಅವನ ಬಗ್ಗೆ ಯಾರನ್ನು ಕೇಳುವುದು? ಎಂದು ತಲೆ ಕೆರೆದುಕೊಳ್ಳುತ್ತಾ ಮನೆಗೆ ವಾಪಾಸ್ ಬಂದ. ನಾರಾಯಣನಿಗೆ ತನ್ನ ಮನೆಯನ್ನು ತೋರಿಸಿದ್ದ ಕುಮಾರನು ಅವನ ಮನೆಯ ವಿಳಾಸ ತೆಗೆದುಕೊಂಡಿಲ್ಲದ್ದಕ್ಕೆ ಪೇಚಾಡಿದ. ನಾಳೆ ಯಾರನ್ನಾದರೂ ವಿಚಾರಿಸಿ ಅವನ ಮನೆಯನ್ನು ಪತ್ತೆ ಮಾಡಬೇಕು ಎಂದುಕೊಂಡು ಬಂದು ಮಲಗಿದಾಗ ಮಧ್ಯರಾತ್ರಿಯಾಗಿತ್ತು.

ನಾರಾಯಣನ ಮನೆ ಎಲ್ಲಿದೆ ಎಂದು ಯಾರನ್ನು ವಿಚಾರಿಸುವುದು? ಇಷ್ಟಕ್ಕೂ ಆ ಕಸದ ತೊಟ್ಟಿಯಲ್ಲಿ ಡಿಗ್ರಿ ಸರ್ಟಿಫಿಕೇಟುಗಳು ಅವನಿಗೆ ಸಿಕ್ಕಿದೆಯೊ ಇಲ್ಲವೋ? ಎಂಬ ಗೊಂದಲದಲ್ಲಿ ಎರಡು ಮೂರು ದಿನ ಸರಿಯಿತು. ಕುಮಾರನಿಗೂ ಕಾಲೇಜಿನ ಕೆಲಸಗಳ ಒತ್ತಡದಲ್ಲಿ ಮನೆಗೆ ಬರುವುದು ಬಹಳ ತಡವಾಗುತ್ತಿತ್ತು. ಹಾಗಾಗಿ ನಾರಾಯಣನ ಬಗ್ಗೆ ಯಾರನ್ನಾದರೂ ವಿಚಾರಿಸಲೂ ಸಾಧ್ಯವಾಗಲಿಲ್ಲ. ಇದಾಗಿ ನಾಲ್ಕನೆಯ ದಿನ ಬೆಳ್ಳಂಬೆಳಗ್ಗೆ ಒಂದೇ ಸಮನೆ ಜಿಗಣೆ ಕುಮಾರನ ಮನೆಯ ಕಾಲಿಂಗ್ ಬೆಲ್ ಹೊಡೆದುಕೊಳ್ಳತೊಡಗಿತು. ಇಂದು ರಜಾದಿನ ಸ್ವಲ್ಪ ಲೇಟಾಗಿ ಏಳೋಣ ಎಂದು ಮಲಗಿದ್ದರೆ ಯಾರದು ಇಷ್ಟೊತ್ತಿಗೆ ಕಿರಿಕಿರಿ ಎನ್ನುತ್ತಾ ಬಾಗಿಲು ತೆರೆದ ಕುಮಾರನಿಗೆ ಆಶ್ಚರ್ಯವಾಗುವಂತೆ ಹುಡುಕುತ್ತಿದ್ದ ಬಳ್ಳಿ ಕಾಲಿಗೆ ತೊಡರಿದಂತೆ, ಬಾಗಿಲಲ್ಲಿ ನಾರಾಯಣನು ಹಲ್ಲು ಕಿರಿಯುತ್ತಾ ನಿಂತಿದ್ದ. ತಾನು ಹುಡುಕುತ್ತಿದ್ದ ಕಥೆಯ ನಾಯಕನೇ ಕಥೆಗಾರನ ಮನೆಗೆ ಬಂದಿದ್ದ. ಅವನೇನು ಬರಿಗೈಯಲ್ಲಿ ಬಂದಿರಲಿಲ್ಲ. ಕಥೆಗಾರ ಮತ್ತು ಅವನ ಹೆಂಡತಿಯು ಕಳೆದುಕೊಂಡಿದ್ದ ಸರ್ಟಿಫಿಕೇಟುಗಳುಳ್ಳ ಕವರನ್ನು ಹೊತ್ತು ತಂದಿದ್ದ. 'ತಗೊಳ್ಳಿ ಸರ್ ನಿಮ್ಮ ಸರ್ಟಿಫಿಕೇಟುಗಳು' ಎಂದು ಹೇಳಿದ ನಾರಾಯಣನನ್ನು 'ಬಾರಯ್ಯ ಒಳಗೆ' ಎಂದ ಕುಮಾರ್. ಕುಮಾರನಿಗೆ ಕಳೆದುಹೋಗಿದ್ದ ಡಿಗ್ರಿ ಸರ್ಟಿಫಿಕೇಟ್ಸ್ ಅನಾಯಾಸವಾಗಿ ಮರಳಿ ಕೈಗೆ ಬಂದಿದ್ದಕ್ಕೆ ಬಹಳ ಸಂತೋಷವಾಗಿತ್ತು.

'ಸಾರ್ ಏನೇ ಕಸದ ತೊಟ್ಟಿಯಲ್ಲಿ ಸಿಕ್ಕರೂ ನನಗೆ ಬೇಕಿರುವುದನ್ನು ಇಟ್ಟುಕೊಂಡು ಬೇಕಿಲ್ಲದಿರುವುದನ್ನು ಎಸೆಯುತ್ತೇನೆ. ಹಾಗೆ ನಿಮ್ಮ ಕವರನ್ನು ಎಸೆಯುವ ಮೊದಲು ಒಮ್ಮೆ ತೆಗೆದುನೋಡಿದಾಗ ಅದು ನಿಮ್ಮ ಒರಿಜಿನಲ್ ಸರ್ಟಿಫಿಕೇಟ್ಸ್ ಎಂದು ತಿಳಿಯಿತು. ಹಾಗಾಗಿ ಅದನ್ನು ಎತ್ತಿಟ್ಟುಕೊಂಡೆ. ಈಗ ಕೊಡಲು ಬಂದೆ' ಎಂದ ನಾರಾಯಣ. 'ಬಾರಯ್ಯ ಕುಳಿತುಕೋ. ಒಂದು ಕಪ್ ಟೀ ಆದ್ರೂ ಕುಡಿದು ಹೋಗು' ಎಂದು ಕುಮಾರ ಎಷ್ಟೇ ಒತ್ತಾಯಿಸಿದರೂ ಕುಳಿತುಕೊಳ್ಳದೆ, ಸ್ವಲ್ಪ ಹಣ ಕೊಡಲು ಹೋದಾಗ ನಯವಾಗಿ ನಿರಾಕರಿಸಿ, 'ಸರ್ ನೀವು ನಮ್ಮ ಕನ್ನಡದವರು, ನಮ್ಮ ಮೆಚ್ಚಿನ ಕಥೆಗಾರರು ಅಂತ ಖುಷಿಯಿದೆ. ದಯವಿಟ್ಟು ಹಣ ಬೇಡ' ಎಂದು ಹೇಳಿದ ಆತನ ಪ್ರಾಮಾಣಿಕತೆ ಕುಮಾರನ ಮನಸ್ಸನ್ನು ತಟ್ಟಿತು. ಅವನ ಊರು, ಕುಟುಂಬ ಮತ್ತು ಇಲ್ಲಿ ಅವನ